ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು - ೧೫

ಪಟ್ಟಿ-೩

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತೆಂಟನೆಯ ಅಧಿವೇಶನ

## ಗುರುವಾರ, ದಿನಾಂಕ: ೨೯ನೇ ಜನವರಿ, ೨೦೨೬

---

### ಸಮೂಹ - IV

೧. ಮುಖ್ಯಮಂತ್ರಿಗಳು

೨. ಉಪ ಮುಖ್ಯಮಂತ್ರಿಗಳು

೩. ಗೃಹ ಸಚಿವರು

೪. ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

೫. ಅಬಕಾರಿ ಸಚಿವರು

೬. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

---

### ಶುದ್ಧ ಇಲ್ಲದಿರುವ ನಿವೇಶನಗಳ ಬಗ್ಗೆ

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) –**

೩೧ (೩೫೦) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಹಾಗೂ ಹೊಂದಿಕೊಂಡ ಪ್ರದೇಶದಲ್ಲಿ ದಾಖಲೆಗಳು ಶುದ್ಧ ಇಲ್ಲದಿರುವ ನಿವೇಶನಗಳನ್ನು ಖರೀದಿಸಿ ಜನ ಶೋಷಣೆಗೆ ಒಳಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಇದನ್ನು ತಪ್ಪಿಸಲು ಸರ್ಕಾರದಿಂದ ಕೈಗೊಂಡಿರುವ ಕ್ರಮಗಳೇನು ;

(ಆ) ಸರ್ಕಾರ Online ನಲ್ಲಿ ಯಾವುದೇ ಆಸ್ತಿಯ ದಾಖಲೆಗಳು ಪ್ರಕಟಿಸಿ ಖರೀದಿದಾರರು ಆಸ್ತಿಯನ್ನು ಖರೀದಿಸಲು ಅನುವಾಗುವಂತೆ ಮಾಹಿತಿಗಳನ್ನು ಜನತೆಗೆ ಒದಗಿಸುವ ಕಾರ್ಯ ಮಾಡುವುದೇ ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ಧೋರಣೆ ಹೊಂದಿದೆ ;

(ಇ) ಯಾವುದೇ ಆಸ್ತಿಯು ಸಂಪೂರ್ಣ ದಾಖಲಾತಿ ಶುದ್ಧತೆಯಿಂದ ಕೂಡಿದೆಯೆಂದು ದೃಢೀಕರಿಸಿಕೊಂಡ ನಂತರವೇ ಉಪ ನೋಂದಣಾಧಿಕಾರಿಯವರ ಕಛೇರಿಯಲ್ಲಿ ನೋಂದಣಿ ಮಾಡುವ ಬಗ್ಗೆ ಸರ್ಕಾರ ನಿಯಮ ರಚಿಸಲು ಕೈಗೊಂಡಿರುವ ಕ್ರಮಗಳೇನು ?

## ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ಪತ್ರ ನೀಡದ ಕುರಿತು

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) –**

೩೨ (೪೦೮) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕದಲ್ಲಿ ಟೋಕ್ರೆ ಕೋಳಿ ಮತ್ತು ಕೋಳಿ ಡೋರ ಸಮುದಾಯವನ್ನು ೧೯೫೬ ರಿಂದ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಕೇಂದ್ರ ಸರ್ಕಾರವು ಸೇರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕರ್ನಾಟಕದಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಟೋಕ್ರೆ ಕೋಳಿ/ ಕೋಳಿ ಡೋರ ಇವರಿಗೆ ಜಾತಿ ಪ್ರಮಾಣ ಪತ್ರ ನೀಡಲು ತಹಶೀಲ್ದಾರರು/ ಜಿಲ್ಲಾಧಿಕಾರಿಗಳು ಅಡ್ಡಿಪಡಿಸುತ್ತಿದ್ದು, ಜಾತಿ ಪ್ರಮಾಣ ಪತ್ರ ನೀಡದಿರಲು ಕಾರಣವೇನು ;

(ಇ) ಟೋಕ್ರೆ ಕೋಳಿ/ಕೋಳಿ ಡೋರ ಜಾತಿ ಪ್ರಮಾಣ ಪತ್ರ ತೆಗೆದುಕೊಂಡು ಸರ್ಕಾರಿ ಸೇವೆ ಮಾಡಿರುವ ನೌಕರದಾರರ ಪದೋನ್ನತಿ ಮತ್ತು ನಿವೃತ್ತಿ ಹೊಂದಿದವರ ಪಿಂಚಣಿಯನ್ನು ತಡೆ ಹಿಡಿಯಲು ಕಾರಣಗಳೇನು ;

(ಈ) ಕೇಂದ್ರ ಸರ್ಕಾರದ ಸ್ಪಷ್ಟ ಆದೇಶಗಳಿದ್ದರೂ ಈ ಜಾತಿಯವರಿಗೆ ಜಾತಿ ಪ್ರಮಾಣ ಪತ್ರ ಕೊಡುವುದನ್ನು ನಿಲ್ಲಿಸಿ ತೊಂದರೆ ಕೊಡುತ್ತಿರುವ

ಅಧಿಕಾರಿಗಳಿಗೆ ಮತ್ತು ಇಲಾಖೆಯವರಿಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು ;

(ಉ) ೨೦೦೦ರಲ್ಲಿ ಸುಪ್ರೀಂ ಕೋರ್ಟ್ ಈಗಾಗಲೇ ಸೇವೆಯಲ್ಲಿರುವವರಿಗೆ ತೊಂದರೆ ನೀಡಬಾರದು ಎಂದು ಸ್ಪಷ್ಟ ತೀರ್ಪು ನೀಡಿದ್ದರೂ ಸರ್ಕಾರ ತೀರ್ಪಿಗನುಸಾರವಾಗಿ ಏಕೆ ನಡೆದುಕೊಳ್ಳುತ್ತಿಲ್ಲ ? (ವಿವರ ನೀಡುವುದು)

## ಸಿಂಧನೂರು ತಾಲ್ಲೂಕನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) –**

೩೩ (೩೫೮) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸುಮಾರು ೪ ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕು ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಆರ್ಥಿಕವಾಗಿ ಮುಂದುವರೆಯುತ್ತಿದ್ದು, ರಾಯಚೂರು ಜಿಲ್ಲಾ ಕೇಂದ್ರದಿಂದ ಸುಮಾರು ೯೦–೯೫ ಕಿ.ಮೀ ದೂರದಲ್ಲಿರುವುದರಿಂದ ಜನರು ತಮ್ಮ ದೈನಂದಿನ ಆಡಳಿತಾತ್ಮಕ ಕೆಲಸಗಳಿಗೆ ಜಿಲ್ಲಾ ಕೇಂದ್ರಕ್ಕೆ ಅಲೆದಾಡುವುದು ಕಷ್ಟಕರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮಾನ್ವಿ, ಮಸ್ಕಿ, ಸಿರವಾರ, ಸಿರಗುಪ್ಪ, ಲಿಂಗಸಗೂರು ಹಾಗೂ ಕನಕಗಿರಿ ತಾಲ್ಲೂಕು ಕೇಂದ್ರಗಳು ಅವುಗಳ ಜಿಲ್ಲಾ ಕೇಂದ್ರಗಳಿಗಿಂತ ಸಿಂಧನೂರು ತಾಲ್ಲೂಕು ಕೇಂದ್ರಕ್ಕೆ ಹತ್ತಿರದಲ್ಲಿರುವುದು ಸರ್ಕಾರದ ಗಮನದಲ್ಲಿದೆಯೇ :

(ಇ) ಸಿಂಧನೂರು, ಮಸ್ಕಿ, ತುರವಿಹಾಳ (ನೂತನ ಪ್ರಸ್ತಾಪತಿ ತಾಲ್ಲೂಕು), ಸಿರಗುಪ್ಪ, ಕನಕಗಿರಿ ತಾಲ್ಲೂಕುಗಳನ್ನು ಒಳಗೊಂಡಂತೆ ಅಥವಾ ಸಿಂಧನೂರು, ಮಸ್ಕಿ, ಲಿಂಗಸಗೂರು ಹಾಗೂ ಸಿರವಾರ ತಾಲ್ಲೂಕುಗಳನ್ನು ಒಳಗೊಂಡಂತೆ ಸಿಂಧನೂರು ತಾಲ್ಲೂಕು ಕೇಂದ್ರವನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಈ) ಇದ್ದಲ್ಲಿ, ಯಾವ ಹಂತದಲ್ಲಿದೆ ಹಾಗೂ ಯಾವ ಕಾಲಮಿತಿಯೊಳಗೆ ಸಿಂಧನೂರು ತಾಲ್ಲೂಕನ್ನು ಜಿಲ್ಲಾ ಕೇಂದ್ರವನ್ನಾಗಿ ಘೋಷಿಸಲಾಗುತ್ತದೆ ?

## ರಾಜ್ಯದಲ್ಲಿನ ಮರ್ಯಾದೆಗೇಡಿನ ಹತ್ಯೆಗಳ ಬಗ್ಗೆ

**ಶ್ರೀ ಜಗದೇವ್ ಗುತ್ತೇದಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೩೪ (೪೧೧) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮರ್ಯಾದೆಗೇಡಿನ ಹತ್ಯೆಗಳು ಪದೇ ಪದೇ ಸಂಭವಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಅವುಗಳನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಇ) ಮರ್ಯಾದೆಗೇಡು ಹತ್ಯೆ ತಡೆಗೆ ಪ್ರತ್ಯೇಕ ಕಾನೂನು ಇಲ್ಲದಿರುವುದರಿಂದ ಇಂತಹ ಪ್ರಕರಣಗಳು ಮರುಕಳಿಸುತ್ತಿವೆಯೇ ;

(ಈ) ಮರ್ಯಾದೆಗೇಡು ಹತ್ಯೆ ತಡೆಗೆ ಪ್ರತ್ಯೇಕ ಕಾನೂನು ರಚಿಸಲು ಸರ್ಕಾರ ಮುಂದಾಗುವುದೇ ?

## ಕೊಡಗು ಜಿಲ್ಲೆಯ ಕೊಡವ ಹೆರಿಟೇಜ್ ಕಾಮಗಾರಿಯ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೫ (೩೯೬) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯ ಕೊಡವ ಹೆರಿಟೇಜ್ ಕಾಮಗಾರಿಯು ವಿಳಂಬವಾಗಲು ಕಾರಣವೇನು ;

(ಆ) ೨೦೨೫–೨೬ ನೇ ಸಾಲಿನ ಆಯವ್ಯಯ ಘೋಷಣೆಯಲ್ಲಿ ರಾಜ್ಯದ ಆಯ್ದ ೧೦ ಜಿಲ್ಲೆಗಳಲ್ಲಿನ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸುವುದು ಎಂದು

ಘೋಷಿಸಲಾಗಿದ್ದು, ಈ ಪೈಕಿ ಕೊಡಗು ಜಿಲ್ಲೆಯ ಕೊಡವ ಹೆರಿಟೇಜ್ ಕೇಂದ್ರವನ್ನು ಅಂದಾಜು ಮೊತ್ತ ರೂ.೫.೦೦ ಕೋಟಿಗಳಲ್ಲಿ ಅಭಿವೃದ್ಧಿಪಡಿಸುವ ಪ್ರಸ್ತಾವನೆಯು ಯಾವ ಹಂತದಲ್ಲಿದೆ ;

(ಇ) ಸದರಿ ೫.೦೦ ಕೋಟಿ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; ಮತ್ತು ಬಾಕಿ ಉಳಿದಿರುವ ಅನುದಾನ ಎಷ್ಟು : ಈಗಾಗಲೇ ಎಷ್ಟು ಮೊತ್ತದ ಅನುದಾನ ಬಿಡುಗಡೆಯಾಗಿದೆ ?

## ರಾಜ್ಯದಲ್ಲಿ ಕೆರೆಗಳನ್ನು ಒತ್ತುವರಿ ಮಾಡಿರುವ ಬಗ್ಗೆ

**ಡಾ: ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) –**

೩೬ (೩೮೬) ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಎಷ್ಟು ಸಾವಿರ ಮೂಲ ಕೆರೆಗಳು ಇದ್ದವು ; ಅದರಲ್ಲಿ ಪ್ರಸ್ತುತ ಎಷ್ಟು ಕೆರೆಗಳು ಅಸ್ತಿತ್ವದಲ್ಲಿವೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಸಾವಿರಾರು ಕೆರೆಗಳನ್ನು ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇಲಾಖೆಯ ವತಿಯಿಂದ ಸರ್ವೇ ಕಾರ್ಯ ನಡೆಸಲಾಗಿದೆಯೇ ; (ಪೂರ್ಣ ಮಾಹಿತಿಯನ್ನು ಒದಗಿಸುವುದು)

(ಇ) ರಾಜ್ಯದಲ್ಲಿ ೧೦೦ ಎಕರೆ ವಿಸ್ತೀರ್ಣಕ್ಕಿಂತ ಕಡಿಮೆ ಇರುವ ಕೆರೆಗಳು ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಗೆ ಸೇರುತ್ತದೆಯೇ; ಇವುಗಳ ದಾಖಲೆಗಳನ್ನು ಸಂರಕ್ಷಿಸಲಾಗಿದೆಯೇ ಹಾಗೂ ಹೆಚ್ಚಿನ ವಿಸ್ತೀರ್ಣ ಇರುವ ಕೆರೆಗಳು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ಕೆರೆಗಳ ಸೂಕ್ತ ದಾಖಲೆಗಳಿಲ್ಲದೆ ಅವುಗಳನ್ನು ಸಂರಕ್ಷಿಸಲು ಸಾಧ್ಯವಾಗದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಜಿಬಿಎ ವ್ಯಾಪ್ತಿಯಲ್ಲಿರುವಂತಹ ಕೆರೆಗಳ ಸಂಖ್ಯೆ ಎಷ್ಟು ; ಇದರಲ್ಲಿ ಒತ್ತುವರಿಯಾಗಿರುವ ಕೆರೆಗಳು ಯಾವುವು ಹಾಗೂ ಕೆರೆಗಳನ್ನು ಸಂರಕ್ಷಿಸಲು ಇರುವಂತಹ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳೇನು ?

## ಬೆಂಗಳೂರು ಪಿ.ಆರ್.ಆರ್. ಯೋಜನೆಗೆ ಭೂಮಿ ನೀಡಿರುವ ರೈತರಿಗೆ ಪರಿಹಾರ ನೀಡುವ ಕುರಿತು

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೭ (೨೬೦) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ಪಿ.ಆರ್.ಆರ್ ಯೋಜನೆಗೆ ಭೂಮಿ ನೀಡಿದ ರೈತರಿಗೆ ಪರಿಹಾರ ದರ ನಿಗದಿಪಡಿಸಲಾಗಿದೆಯೇ ;

(ಆ) ಭೂ ಸ್ವಾಧೀನ ಕಾಯಿದೆ ೧೮೯೪ ಮತ್ತು ೨೦೧೩ ಕಾಯಿದೆಯ ಸಾಮ್ಯತೆಗೆ ಅನುಗುಣವಾಗಿ ಪರಿಹಾರ ನಿಗದಿಪಡಿಸಲಾಗಿದೆಯೇ ; ೨೦೧೩ರ ಕಾಯಿದೆ ಪ್ರಕಾರವೇ ರೈತರಿಗೆ ಪರಿಹಾರ ನೀಡಲು ಸರ್ಕಾರಕ್ಕಿರುವ ತೊಂದರೆಗಳೇನು ; ವಿಳಂಬ ನೀತಿ ಅನುಸರಿಸಲಾಗುತ್ತಿದೆಯೇ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಪೆರಿಫೆರಲ್ ವರ್ತುಲ ರಸ್ತೆ ನಿರ್ಮಾಣ ಸಂಬಂಧ ಬಿಡಿಎ ಸುಮಾರು ೪ ಸಾವಿರ ರೈತರಿಗೆ ನೋಟಿಸ್ ನೀಡಿ ಭೂಮಿ ಬಿಟ್ಟುಕೊಟ್ಟು ಪರಿಹಾರ ಪಡೆಯಲು ಒಪ್ಪಿಗೆ ಸೂಚಿಸುವಂತೆ ವಿನಂತಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು ; (ವಿವರ ನೀಡುವುದು)

(ಈ) ಸದರಿ ನೋಟಿಸ್‌ಗೆ ರೈತರು ನೀಡಿರುವ ಉತ್ತರವೇನು ; ಪಿ.ಆರ್.ಆರ್ ರಸ್ತೆ ಹಾದು ಹೋಗುವ ಮಾರ್ಗದಲ್ಲಿ ಪ್ರತಿ ಎಕರೆಗೆ ಹೊಸ ದರ

ನೀಡಬೇಕು ಇಲ್ಲವೇ ಯೋಜನೆ ಕೈಬಿಡಬೇಕು ಎಂದು ರೈತರು ನೋಟಿಸ್ ಗೆ ಉತ್ತರ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಹಾಗಿದ್ದಲ್ಲಿ, ಸರ್ಕಾರ ರೈತರ ಪರವಾಗಿ ತೆಗೆದುಕೊಂಡಿರುವ ನಿರ್ಣಯಗಳೇನು ; (ವಿವರ ನೀಡುವುದು) ಇಲ್ಲಿ ರಸ್ತೆ ನಿರ್ಮಾಣಕ್ಕೆ ಅಗತ್ಯ ಇರುವ ಭೂ ಸ್ವಾಧೀನಕ್ಕೆ ೧೯೫ ವರ್ಷಗಳ ಹಿಂದೆಯೇ ಅಧಿಸೂಚನೆ ಹೊರಡಿಸಿದ್ದು, ರೈತರು ಈ ಅಧಿಸೂಚಿತ ಭೂಮಿಯಲ್ಲಿ ಬೆಳೆಯನ್ನು ಬೆಳೆಯಲಾಗದೆ ಯಾವುದೇ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗದೆ ಸಂಕಷ್ಟಕ್ಕೆ ಸಿಲುಕಿರುವುದರಿಂದ ಸರ್ಕಾರ ಭೂಸ್ವಾಧೀನ ಕಾಯ್ದೆ ೧೮೯೪ ಬದಲು ೨೦೧೩ ಕಾಯ್ದೆಯಂತೆ ರೈತರಿಗೆ ಪರಿಹಾರ ನೀಡಲು ಮುಂದಾಗುವುದೇ ? (ವಿವರ ನೀಡುವುದು)

## ಪರಿಶಿಷ್ಟ ವರ್ಗಗಳಲ್ಲಿನ ಅತೀ ಹಿಂದುಳಿದವರಿಗೆ ನೇರ ನೇಮಕಾತಿಯ ಬಗ್ಗೆ

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶನ ಹೊಂದಿದವರು) –**

೩೮ (೩೯೧) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪರಿಶಿಷ್ಟ ವರ್ಗಗಳ ಪಟ್ಟಿಯಲ್ಲಿರುವ ಸಮುದಾಯಗಳ ಪೈಕಿ ಅತೀ ಹಿಂದುಳಿದ ಸಮುದಾಯಗಳನ್ನು ಗುರುತಿಸಿ ಅವರಿಗೆ ವಿಶೇಷ ನೇರ ನೇಮಕಾತಿ (Special Direct Recruitment) ಕಲ್ಪಿಸಲು ಹೊಸ ಕಾನೂನು ರೂಪಿಸಲು ಅಥವಾ ವಿಶೇಷ ನಿಯಮಾವಳಿಗಳನ್ನು ಜಾರಿಗೆ ತರುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ; ಇದ್ದಲ್ಲಿ, ಈ ನೇಮಕಾತಿ ಪ್ರಕ್ರಿಯೆಯನ್ನು ಯಾವ ಇಲಾಖೆಗಳ ಅಡಿಯಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ ;

(ಆ) ಪರಿಶಿಷ್ಟ ಪಂಗಡದ ಆದಿವಾಸಿ ಸಮುದಾಯದ(ಯರವ, ಸೋಲಿಗ, ಜೇನುಕುರುಬ, ಕೊರಗ) ಇವರುಗಳನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿ ನೇರ ನೇಮಕಾತಿ ಮಾಡುವ ಪ್ರಸ್ತಾವನೆ ಸರ್ಕಾರದಲ್ಲಿದೆಯೇ ?

## GBA ವ್ಯಾಪ್ತಿಯಲ್ಲಿನ ಕಟ್ಟಡಗಳಿಗೆ ಉಪಸಂಖ್ಯೆ ನೀಡುವ ಬಗ್ಗೆ

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) –**

೩೯ (೩೭೫) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿನ ೨೦೨೩ ನೇ ಸಾಲಿನಿಂದ ೨೦೨೫ ಡಿಸೆಂಬರ್ ಅಂತ್ಯದವರೆಗೆ ಕಟ್ಟಡಗಳಿಗೆ ಉಪಸಂಖ್ಯೆ (Sub-Number) ನೀಡುವಂತೆ ಕೋರಿ ಬಂದ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು ; ವಿಲೇವಾರಿ ಮಾಡಿದ ಅರ್ಜಿಗಳೆಷ್ಟು ಹಾಗೂ ಅವುಗಳಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು ; ವಿಲೇವಾರಿಗೆ ಬಾಕಿ ಇರುವ ಅರ್ಜಿಗಳೆಷ್ಟು ; (ವಿವರ ನೀಡುವುದು)

(ಆ) ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ಕಟ್ಟಡಗಳಿಗೆ ಉಪಸಂಖ್ಯೆ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ಕಟ್ಟಡಗಳಿಗೆ ಉಪಸಂಖ್ಯೆ ನೀಡದಂತೆ ಹೊರಡಿಸಿದ ಆದೇಶ/ಸುತ್ತೋಲೆ ಮಾರ್ಗಸೂಚಿಗಳ ಪ್ರತಿಗಳನ್ನು ನೀಡುವುದು)

(ಇ) ೨೦೨೩ ನೇ ಸಾಲಿನಿಂದ ೨೦೨೫ ನೇ ಸಾಲಿನವರೆಗೆ ನಿರ್ಮಿತವಾದ ಕಟ್ಟಡಗಳಿಗೆ ಉಪಸಂಖ್ಯೆ ನೀಡುವ ಪ್ರಸ್ತಾವ ಸರ್ಕಾರದ ಮುಂದೆ ಇದೆಯೇ ; ಇದ್ದಲ್ಲಿ, ಯಾವ ಕಾಲಮಿತಿಯಲ್ಲಿ ಜಾರಿಗೆ ತರಲಾಗುವುದು ;

(ಈ) ಇಲ್ಲದಿದ್ದಲ್ಲಿ, ಅಂತಹ ಕಟ್ಟಡಗಳ ಮೇಲೆ ಸರ್ಕಾರ ಕೈಗೊಳ್ಳುವ ಮುಂದಿನ ಕ್ರಮಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

## ಕರ್ನಾಟಕದಲ್ಲಿ ನೆಲೆಸಿರುವ ಅಕ್ರಮ ವಲಸಿಗರ ಕುರಿತು

**ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

**ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦ (೩೪೪+೩೩೭+೨೮೭) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪತ್ತೆ ಮಾಡಲಾಗಿರುವ ಅಕ್ರಮ ವಲಸಿಗರ ಸಂಖ್ಯೆ ಎಷ್ಟು ; ಪತ್ತೆ ಮಾಡಲಾದ ಅಕ್ರಮ ವಲಸಿಗರು ಯಾವ ದೇಶದವರೆಂದು ಗುರುತಿಸಲಾಗಿದೆ ; ಕರ್ನಾಟಕ ರಾಜ್ಯದ ಯಾವ ಯಾವ ಭಾಗಗಳಲ್ಲಿ ಅಕ್ರಮ ವಲಸಿಗರು ನೆಲೆಯೂರಿದ್ದಾರೆ ಇವರು ಎಷ್ಟು ವರ್ಷಗಳಿಂದ ರಾಜ್ಯದಲ್ಲಿ ನೆಲೆಯೂರಿದ್ದಾರೆ ; ಇಷ್ಟು ತಡವಾಗಿ ಇಲಾಖೆಯು ಪತ್ತೆ ಹಚ್ಚಲು ಕಾರಣವೇನು ; (ಜಿಲ್ಲಾವಾರು ವಿವರ ನೀಡುವುದು)

(ಆ) ರಾಜ್ಯದಲ್ಲಿ ಸುಮಾರು ೨೦ ಲಕ್ಷಕ್ಕೂ ಅಧಿಕ ಬಾಂಗ್ಲಾ ಅಕ್ರಮ ವಲಸಿಗರು, ನೆಲೆಸಿದ್ದಾರೆ ಎಂಬ ಮಾಹಿತಿ ಇರುವುದು ನಿಜವೇ ; ರಾಜ್ಯದಲ್ಲಿ ಎಷ್ಟು ಬಾಂಗ್ಲಾ ಅಕ್ರಮ ವಲಸಿಗರು ನೆಲೆಸಿದ್ದಾರೆ ಎಂದು ಗೃಹ ಇಲಾಖೆ ಅಂದಾಜಿಸಿದೆ ; ಈ ಅಕ್ರಮ ವಲಸಿಗರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಸರ್ಕಾರ ಏನೇನು ಕ್ರಮಗಳನ್ನು ಕೈಗೊಂಡಿದೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ರಾಜ್ಯದಲ್ಲಿ ನೆಲೆಸಿರುವ ವಿದೇಶಿ ಅಕ್ರಮ ವಲಸಿಗರು ಹಾಗೂ ಬಾಂಗ್ಲಾದೇಶ ಪ್ರಜೆಗಳಿಗೆ ಆಧಾರ್ ಕಾರ್ಡ್ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಯಾವ ಕಾರಣಕ್ಕಾಗಿ ಅವರಿಗೆ ಆಧಾರ್ ಕಾರ್ಡ್ ನೀಡಿ ಇಲ್ಲಿ ವಾಸಿಸಲು ಅವಕಾಶ ಮಾಡಿಕೊಡಲಾಗಿದೆ ; (ಜಿಲ್ಲಾವಾರು ಸಂಪೂರ್ಣ ವಿವರವನ್ನು ನೀಡುವುದು)

(ಈ) ರಾಜ್ಯದ ಕರಾವಳಿ ಮತ್ತು ಮಲೆನಾಡು ಭಾಗದಲ್ಲಿ ಸುಮಾರು ೧೫ ವರ್ಷಗಳಿಂದ ವಾಸವಾಗಿರುವ ಬಾಂಗ್ಲಾ ವಲಸಿಗರು ನಕಲಿ ಗುರುತಿನ ಚೀಟಿ ಬಳಸಿಕೊಂಡು ಸರ್ಕಾರದ ಸೌಲಭ್ಯಗಳನ್ನು ಪಡೆದಿರುವುದು ನಿಜವೇ ;

(ಉ) ಕೊಡಗು ಜಿಲ್ಲೆಯಲ್ಲಿ ಪತ್ತೆಯಾದ ಅಕ್ರಮ ವಲಸಿಗರ ಸಂಖ್ಯೆ ಎಷ್ಟು ಮತ್ತು ಯಾರು ಯಾರು ; ಜಿಲ್ಲೆಯ ಯಾವ ಯಾವ ಭಾಗಗಳಲ್ಲಿ ನೆಲೆಯೂರಿದ್ದರು ; ಇವರು ಯಾವ ದೇಶದವರು ಮತ್ತು ಯಾವಾಗ ಪತ್ತೆ ಹಚ್ಚಲಾಗಿದೆ ಹಾಗೂ ಇವರ ವಿರುದ್ಧ ಕೈಗೊಂಡ ಕ್ರಮಗಳೇನು ; (ಸಂಪೂರ್ಣ ವಿವರವನ್ನು ನೀಡುವುದು)

(ಊ) ಅಕ್ರಮ ವಲಸಿಗರನ್ನು ಗಡಿಪಾರು ಮಾಡಲಾಗಿದೆಯೇ ಅಥವಾ ಗಡಿಪಾರಿಗೆ ಕ್ರಮ ಕೈಗೊಳ್ಳಲಾಗುತ್ತಿದೆಯೇ ; ಗಡಿಪಾರು ಮಾಡಿದ್ದರೆ ಗಡಿಪಾರು ಮಾಡಲಾಗಿರುವವರ ಸಂಖ್ಯೆ ಎಷ್ಟು ಮತ್ತು ಯಾರು ಯಾರು ; ಗಡಿಪಾರು ಮಾಡಲು ಬಾಕಿ ಇರುವವರ ಸಂಖ್ಯೆ ಎಷ್ಟು ಮತ್ತು ಗಡಿಪಾರು ಮಾಡದೆ ಇರಲು ಕಾರಣಗಳೇನು ; (ಕೈಗೊಂಡ ಕ್ರಮಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು)

(ಋ) ಜಿಲ್ಲಾ ಮಟ್ಟದಲ್ಲಿ ಈ ಅಕ್ರಮ ವಲಸಿಗರನ್ನು ಗುರುತಿಸಲು ವಿಶೇಷ ಕಾರ್ಯಪಡೆಯನ್ನು ರಚಿಸಲು ಸರ್ಕಾರಕ್ಕೆ ಇರುವ ತೊಂದರೆಯೇನು ; ಈ ನಿಟ್ಟಿನಲ್ಲಿ ಸಾರ್ವಜನಿಕರಿಂದ ಮಾಹಿತಿ/ದೂರು ಪಡೆಯಲು ವಿಶೇಷ ಸಹಾಯವಾಣಿ ಸಂಖ್ಯೆಯನ್ನು ನೀಡುವ ಬಗ್ಗೆ ಸರ್ಕಾರದ ನಿಲುವೇನು ?

## ವಾರಾಹಿ ಯೋಜನೆ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೧ (೩೦೮) ~~ಗೃಹ ಸಚಿವರು~~ [ಉಪ ಮುಖ್ಯಮಂತ್ರಿಗಳು] ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯ ವಾರಾಹಿ ಯೋಜನೆಯನ್ನು ಪ್ರಾರಂಭಿಸಿದ ಸಂದರ್ಭದಲ್ಲಿ ಅದರ ಮೂಲ ಉದ್ದೇಶವೇನು ; ನಂತರ ಆ ಉದ್ದೇಶದಲ್ಲಿ ಯಾವುದೇ ಮಾರ್ಪಾಡು ಮಾಡಲಾಗಿದೆಯೇ ; ಮಾರ್ಪಾಡು ಮಾಡಿದ್ದಲ್ಲಿ, ಅದಕ್ಕೆ ಕಾರಣಗಳೇನು ;

(ಆ) ವಾರಾಹಿ ಯೋಜನೆಯನ್ನು ಪ್ರಾರಂಭಿಸಿದ ದಿನಾಂಕದಿಂದ ಇದುವರೆಗೆ ಎಷ್ಟು ಬಾರಿ ವಿವರವಾದ ಯೋಜನಾ ವರದಿ (DPR) ತಯಾರಿಸಲಾಗಿದೆ ; ತಯಾರಿಸಲಾದ ಡಿಪಿಆರ್‌ಗಳ ಅನುಸಾರವೇ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆಯೇ ; ಇಲ್ಲದಿದ್ದಲ್ಲಿ, ಅನುಷ್ಠಾನದಲ್ಲಿ ಮಾಡಲಾದ ವ್ಯತ್ಯಾಸಗಳಿಗೆ ಕಾರಣಗಳೇನು ;

(ಇ) ವಾರಾಹಿ ಯೋಜನೆಯಿಂದ ವಿದ್ಯುತ್ ಉತ್ಪಾದನೆ ಮಾಡುವ ಉದ್ದೇಶವಿದೆಯೇ ; ಅದನ್ನು ಈಗ ಮಾಡಲಾಗಿದೆಯೇ ; ಮಾಡಿದ್ದರೆ, ಮಾಡಿರುವವರ್‍ಯಾರು ; ಅದಕ್ಕೆ ಸರ್ಕಾರದಿಂದ ವೆಚ್ಚವಾಗಿರುವ ಮೊತ್ತವೆಷ್ಟು ; ಅದನ್ನು ಈಗ ನಡೆಸಿಕೊಂಡು ಹೋಗುತ್ತಿರುವವರ್‍ಯಾರು ; ಸದರಿ ವಿದ್ಯುತ್ ಉತ್ಪಾದಕರು ಸರ್ಕಾರಕ್ಕೆ ಶುಲ್ಕ ಪಾವತಿಸುತ್ತಿದ್ದಾರೆಯೇ ; ಪಾವತಿಸಲ್ಪಡುವ ಶುಲ್ಕವೆಷ್ಟು ;

(ಈ) ವಿದ್ಯುತ್ ಉತ್ಪಾದನೆ ಕಂಪನಿಗೆ ವಿಧಿಸಿದ ಗುತ್ತಿಗೆ ಕರಾರಿನ ಷರತ್ತುಗಳೇನು ; ಯೋಜನೆಯ ಯಾವ ಯಾವ ಸೌಲಭ್ಯಗಳನ್ನು ಗುತ್ತಿಗೆ ಕಂಪನಿಗೆ ನೀಡಲಾಗಿದೆ ; ಅದಕ್ಕಾಗಿ ವಿಧಿಸಲಾದ ಶುಲ್ಕಗಳ ವಿವರವೇನು ; ವಿದ್ಯುತ್ ಉತ್ಪಾದನೆ ಮಾಡಿದ್ದಲ್ಲಿ, ಯಾವ ದಿನಾಂಕದಿಂದ ಎಷ್ಟು ಪ್ರಮಾಣದ ವಿದ್ಯುತ್ ಉತ್ಪಾದಿಸಲಾಗಿದೆ ; ಉತ್ಪಾದಿತ ವಿದ್ಯುತ್ತನ್ನು ಯಾರಿಗೆ, ಯಾವ ದರದಲ್ಲಿ ವಿತರಿಸಲಾಗಿದೆ ;

(ಉ) ಪ್ರಸ್ತುತ ವಾರಾಹಿ ಯೋಜನೆ ಸ್ಥಗಿತಗೊಂಡಿದೆಯೇ ; ಸ್ಥಗಿತಗೊಂಡಿದ್ದಲ್ಲಿ ಅದಕ್ಕೆ ಕಾರಣಗಳೇನು ; ವಾರಾಹಿ ಯೋಜನೆಗೆ ಸಂಬಂಧಿಸಿದ ಯಾವುದೇ ದೂರುಗಳ ಆಧಾರದಲ್ಲಿ ಕರ್ನಾಟಕ ಲೋಕಾಯುಕ್ತರಿಂದ ತನಿಖೆ ಕೈಗೊಳ್ಳಲಾಗಿದೆಯೇ ; ತನಿಖೆಯ ವಿವರಗಳೇನು ?

## ರಾಷ್ಟ್ರ ವಿರೋಧಿ ಘೋಷಣೆಗಳ ವಿರುದ್ಧ ಕ್ರಮದ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೨ (೨೯೫) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇತ್ತೀಚಿನ ದಿನಗಳಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿನ ಸಾರ್ವಜನಿಕ ಕಾರ್ಯಕ್ರಮಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕೆಲವು ಸಮಾಜಘಾತಕ ಶಕ್ತಿಗಳು "ಪಾಕಿಸ್ತಾನ್ ಜಿಂದಾಬಾದ್" ಮತ್ತು

"ಬಾಂಗ್ಲಾದೇಶ ಜಿಂದಾಬಾದ್" ಎಂಬ ರಾಷ್ಟ್ರ ವಿರೋಧಿ ಘೋಷಣೆಗಳನ್ನು ಕೂಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇಂತಹ ರಾಷ್ಟ್ರ ವಿರೋಧಿ ಘೋಷಣೆಗಳಿಗೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಜಿಲ್ಲಾವಾರು ದಾಖಲಾಗಿರುವ ಪ್ರಕರಣಗಳೆಷ್ಟು ; ಈ ಪೈಕಿ ಎಷ್ಟು ಎಫ್.ಐ.ಆರ್ (FIR) ದಾಖಲಿಸಲಾಗಿದೆ ಮತ್ತು ಎಷ್ಟು ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆಯಾಗಿದೆ ; (ಪ್ರಕರಣಗಳ ಹಂತದ ಬಗ್ಗೆ ಸಂಪೂರ್ಣ ವಿವರ ನೀಡುವುದು)

(ಇ) ಇಂತಹ ಪ್ರಚೋದನಾಕಾರಿ ಘೋಷಣೆಗಳಿಂದ ದೇಶಭಕ್ತ ನಾಗರಿಕರಲ್ಲಿ ಅಸಮಾಧಾನ ಮೂಡಿ ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ಬರುವ ಹಾಗೂ ಸಮುದಾಯಗಳ ನಡುವೆ ಘರ್ಷಣೆ ಉಂಟಾಗುವ ಸಾಧ್ಯತೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ ;

(ಈ) ರಾಷ್ಟ್ರದ ಐಕ್ಯತೆ ಮತ್ತು ಸಾರ್ವಭೌಮತ್ವಕ್ಕೆ ಧಕ್ಕೆ ತರುವ ಇಂತಹ ದೇಶದ್ರೋಹಿ ಚಟುವಟಿಕೆಗಳನ್ನು ಹತ್ತಿಕ್ಕಲು ಹಾಗೂ ರಾಜ್ಯದಲ್ಲಿ ಶಾಂತಿ ಮತ್ತು ಸೌಹಾರ್ದತೆ ಕಾಪಾಡಲು ಸರ್ಕಾರವು ಯಾವುದೇ ಕಠಿಣ ನೀತಿ ಅಥವಾ ವಿಶೇಷ ಕಾನೂನು ಕ್ರಮಗಳನ್ನು ಜಾರಿಗೊಳಿಸುವ ಯೋಜನೆಯನ್ನು ಹೊಂದಿದೆಯೇ ? (ಸಂಪೂರ್ಣ ವಿವರ ನೀಡುವುದು)

## ಕಾನೂನು ಇಲಾಖೆ ವತಿಯಿಂದ ಸರ್ಕಾರ ನಡೆಸುತ್ತಿರುವ ಕೇಸುಗಳ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೩ (೩೮೮) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಾನೂನು ಇಲಾಖೆ ವತಿಯಿಂದ ಸುಪ್ರೀಂ ಕೋರ್ಟ್, ಹೈಕೋರ್ಟ್ ಮತ್ತು ಎಲ್ಲಾ ಜಿಲ್ಲಾ ನ್ಯಾಯಾಲಯಗಳಲ್ಲಿ ಸರ್ಕಾರ

ನಡೆಸುತ್ತಿರುವ ಕೇಸುಗಳ ಸಂಖ್ಯೆ ಎಷ್ಟು ; (ಸಂಪೂರ್ಣ ವಿವರ ಒದಗಿಸುವುದು)

(ಆ) ಈ ಕೇಸುಗಳಲ್ಲಿ ರಾಜ್ಯ ಸರ್ಕಾರದ ಪರವಾಗಿರುವ ಮತ್ತು ಸರ್ಕಾರದ ವಿರುದ್ಧವಾಗಿರುವ ಪ್ರಕರಣಗಳ ವಿವರ ಒದಗಿಸುವುದು ; ಬಾಕಿ ಇರುವ ಕೇಸುಗಳು ಯಾವ ಹಂತದಲ್ಲಿದೆ ;

(ಇ) ರಾಜ್ಯ ಸರ್ಕಾರದಲ್ಲಿ ಒಟ್ಟು ಎಷ್ಟು ಜನ ಅಭಿಯೋಜಕರಿದ್ದಾರೆ ? (ಜಿಲ್ಲಾವಾರು ವಿವರ ಒದಗಿಸುವುದು)

## ವಸ್ತು ಸಂಗ್ರಹಾಲಯಗಳ ಮಾಹಿತಿ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) –**

೪೪ (೩೫೧) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇರುವ ಒಟ್ಟು ಸರ್ಕಾರಿ ಮತ್ತು ಖಾಸಗಿ ವಸ್ತು ಸಂಗ್ರಹಾಲಯಗಳು ಎಷ್ಟು ; (ಪೂರ್ಣ ವಿವರಗಳನ್ನು ಒದಗಿಸುವುದು)

(ಆ) ರಾಜ್ಯದ ವಸ್ತು ಸಂಗ್ರಹಾಲಯಗಳಲ್ಲಿ ಶೇಖರಿಸಿರುವ ವರ್ಗೀಕೃತ ಪುರಾತನ ವಸ್ತುಗಳು, ಕಲಾಕೃತಿಗಳು, ಪ್ರಾಚೀನ ಕಲಾಕೃತಿಗಳು, ವರ್ಣಚಿತ್ರಗಳು ಎಷ್ಟು ; ಇವುಗಳ ಭೌತಿಕ ಪರಿಶೀಲನೆ ಪ್ರತಿ ವರ್ಷ ನಡೆದಿದೆಯೇ ; (ಪೂರ್ಣ ವಿವರಗಳನ್ನು ನೀಡುವುದು)

(ಇ) ರಾಜ್ಯದ ವಸ್ತು ಸಂಗ್ರಹಾಲಯದಲ್ಲಿರುವ ಪ್ರಾಚೀನ/ಪುರಾತನ ವಸ್ತುಗಳನ್ನು ಸಂರಕ್ಷಿಸಲು ರಾಜ್ಯ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿರುತ್ತದೆ ;

(ಈ) ವಸ್ತು ಸಂಗ್ರಹಾಲಯವನ್ನು ಹೊರತುಪಡಿಸಿ ಉಳಿದ ಯಾವ ಇಲಾಖೆಯಲ್ಲಿ ಇಂತಹ ವಸ್ತುಗಳನ್ನು ಸಂಗ್ರಹಿಸಿ ಇಡಲಾಗಿದೆ ; (ವಿವರಗಳನ್ನು ಒದಗಿಸುವುದು)

(ಉ) ರಾಜ್ಯ ಸರ್ಕಾರ ವಾರ್ಷಿಕವಾಗಿ ವಸ್ತು ಸಂಗ್ರಹಾಲಯಗಳಿಗೆ ನೀಡುತ್ತಿರುವ ಅನುದಾನವೆಷ್ಟು ; ರಾಜ್ಯದ ವಸ್ತು ಸಂಗ್ರಹಾಲಯಗಳಿಗೆ ಮಂಜೂರಾಗಿರುವ ಸಿಬ್ಬಂದಿ ಎಷ್ಟು ; ಇದರಲ್ಲಿ ಖಾಯಂ ಸಿಬ್ಬಂದಿ ಎಷ್ಟು ಮತ್ತು ನಿಯೋಜನೆಯ ಮೇಲೆ ಹಾಗೂ ಹೊರಗುತ್ತಿಗೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ? (ಪೂರ್ಣ ವಿವರಗಳನ್ನು ಒದಗಿಸುವುದು)

## ಪರಿಶಿಷ್ಟ ಜಾತಿ ಒಳ ಮೀಸಲಾತಿ ರೋಸ್ಟರ್ ಬಿಂದುಗಳ ಅವೈಜ್ಞಾನಿಕ ಹಂಚಿಕೆ ಮತ್ತು ೧೯೭೭ರ ಮೂಲ ಆದೇಶ ಸರಿಪಡಿಸುವ ಕುರಿತು

**ಶ್ರೀ ಎಫ್.ಹೆಚ್. ಜಕ್ಕಪ್ಪನವರ್ (ನಾಮನಿರ್ದೇಶನ ಹೊಂದಿದವರು) –**

೪೫ (೩೫೭) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯ ಸರ್ಕಾರವು ಆದೇಶ ಸಂಖ್ಯೆ : ಸಿಆಸುಇ/೦೨/ಸೇಹಿಮ/೨೦೨೫, ದಿನಾಂಕ:೦೩.೦೯.೨೦೨೫ರಂದು ಒಳ ಮೀಸಲಾತಿಗೆ ಸಂಬಂಧಿಸಿದಂತೆ ರೋಸ್ಟರ್ ಬಿಂದುಗಳನ್ನು ನಿಗದಿಪಡಿಸಿ ಆದೇಶ ಹೊರಡಿಸಿದ್ದು, ಸದರಿ ಆದೇಶದಲ್ಲಿ ರೋಸ್ಟರ್ ಬಿಂದು ೨,೪,೬,೮ನೇ ಬಿಂದುಗಳನ್ನು ಸಾಮಾನ್ಯ ವರ್ಗಕ್ಕೆ ನಿಗದಿಪಡಿಸಿರುವುದು ಕಾನೂನುಬದ್ಧವಾಗಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಪರಿಶಿಷ್ಟ ಜಾತಿಯ ರೋಸ್ಟರ್ ಬಿಂದು ೧ರ ನಂತರ ೭ನ್ನು ನಿಗದಿಪಡಿಸುವ ಬದಲು ೯ಕ್ಕೆ ಮುಂದೂಡಿರುವುದು ೧೪ರ ಬದಲು ೧೫ನೇ ಬಿಂದುವನ್ನು, ೨೧ರ ಬದಲು ೨೩ನೇ ಬಿಂದುವನ್ನು ನಿಗದಿಪಡಿಸಿರುವುದು, ೨೫ನೇ ಬಿಂದುವನ್ನು ಕೈಬಿಟ್ಟಿರುವುದು, ಹೀಗೆ ಪರಿಶಿಷ್ಟ ಜಾತಿಯ ಬಿಂದುಗಳನ್ನು ಮುಂದೂಡಿ ೧೯೭೭ರ ಆದೇಶ ಸಂಖ್ಯೆ : ಡಿಪಿಎಆರ್/೦೧/ಎಸ್‌ಬಿಸಿ/೧೯೭೭, ದಿನಾಂಕ : ೦೪.೦೩.೧೯೭೭ರ ಆದೇಶವನ್ನು ಉಲ್ಲಂಘಿಸಿರುವುದು ಮೀಸಲಾತಿ ಪಡೆಯುವ ಪರಿಶಿಷ್ಟ ಜಾತಿಗಳಿಗೆ ಅನ್ಯಾಯ ಮಾಡಿದಂತೆ ಆಗುವುದಿಲ್ಲವೇ ;

(ಇ) ದಿನಾಂಕ : ೦೩.೦೯.೨೦೨೫ರ ಆದೇಶವು ನೇರ ನೇಮಕಾತಿಗಳಿಗೆ ಪರಿಷ್ಕೃತ ಮೀಸಲಾತಿ ರೋಸ್ಟರ್ ಬಿಂದುಗಳನ್ನು ನಿಗದಿಪಡಿಸುವ ಆದೇಶವಾಗಿದ್ದು, ಶಿಕ್ಷಣಕ್ಕೆ ಸಂಬಂಧಿಸಿದಂತೆ ಆದೇಶ ಮಾಡದೇ ಇರುವುದರಿಂದ, ಪ್ರಸ್ತುತ ಯಾವ ಆದೇಶದ ಮೇಲೆ ಒಳ ಮೀಸಲಾತಿ ಆಧರಿಸಿ ಶಿಕ್ಷಣ ಕ್ಷೇತ್ರದಲ್ಲಿ ಪ್ರವೇಶಾತಿ ನೀಡಲಾಗುತ್ತಿದೆ ಎಂಬ ಬಗ್ಗೆ ಸರ್ಕಾರ ಸ್ಪಷ್ಟಪಡಿಸುವುದು ;

(ಈ) ದಿನಾಂಕ : ೦೬.೦೯.೨೦೨೫ರ ಆದೇಶ ಹಲವು ಗೊಂದಲಗಳನ್ನು ಉಂಟು ಮಾಡುತ್ತಿದ್ದು, ೧ ಮತ್ತು ೨ ಹುದ್ದೆಗಳಿದ್ದಾಗ ಯಾವ ಪ್ರವರ್ಗಕ್ಕೆ ಹುದ್ದೆ ನಿಗದಿಪಡಿಸಬೇಕು ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲದೇ ಇರುವುದರಿಂದ ಎಲ್ಲಾ ಹುದ್ದೆಗಳು ನಿಗದಿಯಾಗಿರುವ ಪ್ರವರ್ಗಕ್ಕೆ ಮತ್ತೆ ಮತ್ತೆ ನಿಗದಿಯಾಗುತ್ತಿರುವುದರಿಂದ ಸದರಿ ಸಮಸ್ಯೆಯನ್ನು ನಿವಾರಿಸಲು ೧ ಮತ್ತು ೨ ಹುದ್ದೆಗಳಿದ್ದಾಗ ಎಸ್ಸಿ ಸಾಮಾನ್ಯವೆಂದು ನಿಗದಿಪಡಿಸುವ ಬಗ್ಗೆ ಸರ್ಕಾರ ತೆಗೆದುಕೊಂಡ ನಿರ್ಧಾರವೇನು ;

(ಉ) ಪರಿಶಿಷ್ಟ ಜಾತಿಯ ಪ್ರವರ್ಗ–ಎ ರಲ್ಲಿ ಅಭ್ಯರ್ಥಿಗಳು ಇಲ್ಲದೇ ಇದ್ದಾಗ ಪ್ರವರ್ಗ–ಬಿ ಗೆ ಹಾಗೂ ಪ್ರವರ್ಗ–ಬಿ ರಲ್ಲಿ ಅಭ್ಯರ್ಥಿಗಳಿಲ್ಲದೇ ಇದ್ದಾಗ ಪ್ರವರ್ಗ–ಸಿ ಗೆ ಹುದ್ದೆಗಳು ವರ್ಗಾವಣೆಯಾಗುವ ಬಗ್ಗೆ ಸರ್ಕಾರ ತೆಗೆದುಕೊಂಡ ನಿರ್ಧಾರವೇನು ;

(ಊ) ದಿನಾಂಕ : ೦೬.೦೯.೨೦೨೫ರ ಆದೇಶದಲ್ಲಿ ಪ್ರಾರಂಭದ ಎಲ್ಲಾ ಹುದ್ದೆಗಳು ಸಾಮಾನ್ಯ ವರ್ಗದವರಿಗೆ ದೊರಕುವಂತೆ ರೋಸ್ಟರ್ ನಿಗದಿಪಡಿಸಿರುವುದನ್ನು ಪರಿಷ್ಕರಿಸುವ ಬಗ್ಗೆ ಸರ್ಕಾರದ ನಿರ್ಧಾರವೇನು ?

**ಕೆ.ಆರ್. ಮಹಾಲಕ್ಷ್ಮಿ**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. ಕಾಸೂ – 656 ಪ್ರತಿಗಳು (ಪಿ6)

**List of Questions for Oral Answers**

**Total No. of Questions - 15**

# LIST - 03

# KARNATAKA LEGISLATIVE COUNCIL

## ONE HUNDRED AND FIFTY EIGHTH SESSION

## Thursday, the 29th January, 2026

---

**GROUP - IV**

1. Chief Minister
2. Deputy Chief Minister
3. Minister for Home
4. Minister for Law, Parliamentary Affairs and Legislation and Tourism
5. Minister for Excise
6. Minister for Minor Irrigation, Science and Technology.

---

**REGARDING SITES WITHOUT PROPER DOCUMENTS**

**Smt. Bharathi Shetty (Nominated) -**

31 (350) Will the Deputy Chief Minister be pleased to state:-

(a) whether it has come to the notice of the Government that the people are being exploited by purchasing sites without proper documents in Bengaluru and adjacent area; if so, the steps taken by the Government to prevent the same;

(b) whether the Government will come forward to provide the informations to the public so as facilitate to the purchase of property by the buyers by publishing any

property documents in online; if so, the stand of the Government in this regard;

(c) the steps taken by the Government to frame the rules with regard to registration in the Office of the Sub Registrar only after confirming that the complete documents of any property are clear?

**NON ISSUACNE OF CASTE CERTIFICATE OF SCHEDULED TRIBE**

**Dr.Talwar Sabanna (Nominated) -**

32(408) Will the Chief Minister be pleased to state:-

(a) whether it has come to the notice of the Government that the Tokre Koli and Koli Dhor community in the Karnataka has been inserted in the Scheduled Tribe list by the Central Government from 1956:

(b) obstructing the Tahsildars/Deputy Commissioner are interrupting to issue the caste certificate for Tokre Koli/ Koli Dhor community in Karnataka especially in North Karnataka, the reasons for non issuance of the same;

(c) the reason for withholding of promotion of the employees and pension of the retired employees who have served in the Government by taking Tokre Koli/Koli Dhor caste certificate;

(d) the action that would be taken on the officers and the department who are giving harassment by stopping of issuance of caste certificate for these categories eventhough there are clear orders of the Central Government;

(e) the reasons for the Government not complying eventhough the clear judgment has been pronounced by the Supreme Court in 2000 that the harassment has not given for the employees who are already inservice?

## DECLARATION OF SINDHANUR TALUK INTO DISTRICT HEAD QUARTER

**Sri Basanagouda Badarli (Elected by Legislative Assembly) -**

33(358) Will the Chief Minister be pleased to state:-

(a) the population of the Sindhanur taluk of Raichur district is approximately more than 4 lakhs and it is developing Socially, Educationally, Culturally and Economically, whether it has come to the notice of the Government that the hardship is being faced by the people roaming to the district head quarter for their daily administrative works as it is situated approximately 90-95 K.M distance from the Raichur Head quarter;

(b) whether the Government is aware that Manvi, Maski, Sirvara, Siraguppa, Lingasgur and Kanakagiri taluk head quarter are near to Sindhanur taluk head quarter than their district head quater;

(c) whether the proposals is before the Government to make Sindhanur taluk head quarter into district head quarter including Sindhanur, Maski, Turvihal (newly proposed taluk), Siraguppa and Kanakagiri taluks or including Sindhanur, Maski, Lingasagur and Sirvara taluks;

(d) if so, the present stage of the same and timelimit within which Sindhanur taluk would be declared into district head quarter?

## HONOUR KILLINGS IN THE STATE

**Sri Jagadev Guttedar (Elected by Legislative Assembly) -**

34(411) Will the Minister for Home be pleased to state:-

(a) whether it has come to the notice of the Government that the issue of honour killings are being occurred repeatedly in the State;

(b) if so, the steps taken by the Government to control the same;

(c) whether such cases recurring since there is no separate law to prevent the honour killing;

(d) whether the Government would come forward to constitute separate law to prevent the honour killing?

**KODAVA HERITAGE WORK IN KODAGU DISTRICT**

**Sri. Kushalappa M.P. (suja) (Local Authorities Constituency) -**

35(396) Will the Minister for Minister for Law, Parliamentary Affairs and Legislation and Tourism be pleased to state:-

(a) the reason for the delay in the kodava heritage work of Kodagu district;

(b) it has been declared in the budget for the year 2025-26 that the tourist spots in 10 selected districts of the State would be developed out of which, the present stage of the proposal to develop the kodava heritage centre of Kodagu district in the estimated amount of Rs. 5 crores;

(c) the particulars of works that have been taken up in the said grant of Rs. 5 crores; and the outstanding grant for the same; the grant that has been released already there for?

**ENCROACHMENT OF LAKES IN THE STATE**

**Dr. Umashree (Nominated) -**

36(386) Will the Minister for Minor Irrigation, Science and Technology. be pleased to state:-

(a) the number in thousands of the original lakes that were existing in all districts of the State; out of which, the number of lakes that are existing at present; (districtwise information be furnished)

(b) whether it has come to the notice of the Government that thousands of lakes in the State have been encroached; whether the survey work has been conducted by the Department; (complete information be furnished)

(c) whether the lakes which are less than 100 acre of extent in the State belongs to the concerned local bodies; whether the documents of the same have been preserved and whether it has come to the notice of the Government that there is no possibility in preserving the lakes which have larger area without proper documents and coming in the jurisdiction of the Minor Irrigation Department;

(d) the number of lakes in the limits of Greater Bengaluru Authority; out of which, the particulars of lakes that have been encroached and the functions of Tank Conservation and Development Authority which is functioning for protection of the lakes?

**PROVIDING COMPENSATION FOR FARMERS**

**Sri H.S. Gopinath (Local Authorities Constituency) -**

37(260) Will the Deputy Chief Minister be pleased to state:-

(a) whether the compensation rate has been fixed for the farmers who have given the land for P.R.R. Project by the Bengaluru Development Authority;

(b) whether the compensation has been fixed as per the land acquisition Act 1894 and 2013; the prevailing impediments to the Government to provide the compensation for farmers as per the Act of 2013; whether the delay tactics is being complied; (complete information be furnished)

(c) whether it has come to the notice of the Government that the BDA has served notices to about 4,000 farmers

regarding peripheral ring road construction and requesting them to agree to give up their land and receive compensation; if so, the measures taken in this regard; (details be furnished)

(d) the reply given by the farmers to the said notice; whether it has come to the notice of the Government regarding the reply given by the farmers to the notice that the new price should be given for each acre of land in the route where the P.R.R road passing through otherwise this project should be withdrawn;

(e) if so, the decision taken by the Government on behalf of farmers; (details be furnished) the notification has been issued 195 years ago for the acquisition of required land to the construction of road, whether the Government will come forward to provide the compensation for farmers as per the Act of 2013 instead of Land Acquisition Act, 1894 due to the farmers are in distressed condition without growing the crop in this notified land and without taking up any developmental work? (details be furnished)

## DIRECT RECRUITMENT FOR THE MOST BACKWARD CLASSES IN THE SCHEDULED TRIBES

**Sri. Shivakumar K. (Nominated) -**

38(391) Will the Chief Minister be pleased to state:-

(a) whether the proposal is before the Government to constitute new law or implementation of special rules to make provision for the special direct recruitment to the most backward communities by recognizing from the communities listed in Scheduled Tribes; if so, the particulars of Department under which this recruitment process would be intended to taken up;

(b) whether the proposal for the direct recruitment is before the Government by considering the people of tribal community of Scheduled Tribes (Yerava, Soliga, Jenu Kuruba, Koraga) as a special case?

## PROVIDING SUB NUMBER TO BUILDINGS IN THE LIMITS OF GREATER BENGALURU AUTHORITY

**Sri. Sharavana T.A (Elected by Legislative Assembly) -**

39(375) Will the Deputy Chief Minister be pleased to state:-

(a) the total number of applications that have been received for seeking to provide sub number for the buildings from the year 2023 till the end of December 2025 in the limits of Greater Bengaluru Authority; the number of applications that have been disposed off and the revenue that has been accrued to the exchequer of the Government from the same; the number of applications which have been pending for the disposal; (details be furnished)

(b) whether it has come to the notice of the Government that sub number is not been given to the buildings in the limits of Greater Bengaluru Authority; (copies of the orders/circulars of guidelines that are issued for providing sub number to buildings be furnished)

(c) whether the proposal is before the Government to provide the sub number to the buildings that have been constructed from the year 2023 to 2025; if so, the timelimit within which the same would be implemented;

(d) if not, the next step that would be taken by the Government against such buildings? (complete information be furnished)

## ILLEGAL IMMIGRANTS IN KARNATAKA

**Sri Kishor Kumar Puttur (Local Authorities Constituency) -**

**Sri Kushalappa M.P. (suja) (Local Authorities Constituency) -**

**Sri Keshava Prasad S. (Elected by Legislative Assembly) -**

40(344+337+287) Will the Minister for Home be pleased to state:-

(a) the number of illegal immigrants who have been traced out in the State; out of the detected illegal immigrants, the nation identified as they are belonging; the particulars of regions in the Karnataka State in which the illegal immigrants have been residing; the years from which they are residing in the State; the reasons for the same have been traced out with so much delay; (districtwise details furnished)

(b) whether it is true about the information that there are approximately more than 20 lakhs Bangla illegal immigrants residing in the State; the estimation of the Home Department about the number of Bangla illegal immigrants who are residing in the State; the particulars of measures taken by the Government to initiate legal action against this illegal immigrants; (districtwise details be furnished)

(c) whether it has come to the notice of the Government that the Aadhar Card has been issued to foreign illegal immigrants and the citizens of Bangladesh who are residing in the State; if so, the reasons for which the provision has been made to reside here by issuing Aadhar card to them; (districtwise complete details be furnished)

(d) whether it is true that the facilities of the Government have been obtained by utilizing fake identity card by

the Bangla immigrants who are residing about 15 years in coastal and Malnad region of the State;

(e) the number of illegal immigrants who have been tracedout in Kodagu district and the particulars there of; the particulars of region of the district the same have been residing; the particular of nation they are belonging; the duration by when they have been tracedout and the actions that has been taken against them; (complete details be furnished)

(f) whether the illegal immigrants have been expelled or whether the step has been taken for expelling; if so, the number of expelled people and the particulars there of; the number of people yet to be expelled and the reasons for the same have not been expelled; (the complete information with regard to the step taken be furnished)

(g) the prevailing impediments to the Government to constitute the special task force to identify these illegal immigrants in the district level; the stand of the Government with regard to providing special helpline number to get information/complaints from public in this regard?

**REGARDING VARAHI PROJECT**

**Sri. Manjunatha Bhandari (Local Authorities Constituency) -**

41(308) Will the Deputy Chief Minister be pleased to state:-

(a) the main object of the Varahi Project during the commencement of this project in Udupi district; thereafter, whether any modification has been made in that object; if so, the reasons for the same;

(b) the number of times the detailed project report(D.P.R) has been prepared till date from the commencement of

Varahi Project; whether the project has been implemented according to the prepared DPR's; if not, the reasons for the difference made in the implementation;

(c) whether there is an intention of generating electricity from the Varahi Project; whether the same has been done at present; if so, the authority who have made the same; the amount spent by the Government thereof; the authority who is running the same at present; whether the fee is being paid to the Government from the said electricity generators; the fee to be paid;

(d) the conditions of the contract imposed to the electricity generation company; the particulars of facilities that have been provided to the contact company; the details of fee imposed therefor; if the electricity has been generated, the date from which, the quantum of electricity has been generated; the persons to whom and the price in which the generated electricity has been distributed;

(e) whether the Varahi Project has been stagnated at present; if so, the reasons for the same; whether the investigation has been conducted by the Karnataka Lokayukta on the basis of any complaints with regard the Varahi Project; the details of the investigation?

**REGARDING ACTION TAKEN AGAINST ANTI-NATIONAL SLOGANS**

**Sri. D.S.Arun (Local Authorities Constituency) -**

42(295) Will the Minister for Home be pleased to state:-

(a) whether it has come to the notice of the Government that some anti-social elements have raised the anti-national slogans like "Pakistan Zindabad" and "Bangladesh Zingabad" in public events and public places of various districts of the State in recent days;

(b) the number of districtwise cases that have been lodged in the State with regard to such anti-national slogans during the last three years; out of which, the number of First Information Reports (FIR) that have been lodged and the number of cases in which accused have been punished; (the complete details regarding the present stage of the cases be furnished)

(c) whether the Government has seriously considered that there is a possibility to threaten to the law and order of the State and causing clashes between the communities by creating discontent among the patriotic citizens from such provocative slogans;

(d) whether any stringent policy or special legal actions would be implemented by the Government to suppress such anti-national activities which are threatening to the Unity and Sovereignty of the Nation and maintain the peace and harmony in the State? ( complete details be furnished)

**CASES HANDLING BY THE GOVERNMENT THROUGH LAW DEPARTMENT**

**Sri K.S. Naveen (Local Authorities Constituency) -**

43(388) Will the Minister for Law, Parliamentary Affairs and Legislation and Tourism be pleased to state:-

(a) the number of cases that are being handled by the Government in the Supreme Court, High Court and all District Courts by the Law Department; (complete details be furnished)

(b) out of these cases, the details of cases in favour of the State Government and against the State Government be furnished; the present stage of the pending cases;

(c) the number of prosecutors present in the State Government? (districtwise details be furnished)

## REGARDING INFORMATION OF MUSEUMS

**Sri Ramesh Babu (Nominated) -**

44(351) Will the Minister for Law, Parliamentary Affairs and Legislation and Tourism be pleased to state:-

(a) the total number of Government and private museums in the State; (complete details be furnished)

(b) the number of classified antiques, Artifacts, Ancient artifacts, paintings which have been stored in the museums of the State; whether the physical inspection of the same has been carried out every year: (complete details be furnished)

(c) the particulars of measures taken by the State Government to preserve the ancient antiques in the museums of the State;

(d) the particular of department in which such objects have been stored excluding the museums; (details be furnished)

(e) the grant which is being provided by the State Government for the museums annually; the number of staff that have been sanctioned to museums of the State; out of which, the number of staff who are working on permanent and deputation and outsourced basis? (complete details be furnished)

## UNSCIENTIFIC ALLOCATION OF ROSTER POINTS IN INTERNAL RESERVATION OF SCHEDULED CASTE AND THE SETRIGHT OF ORIGINAL ORDER OF 1977

**Sri F.H. Jakkappanavar (Nominated) -**

45(357) Will the Chief Minister be pleased to state:-

(a) on 03.09.2025 the State Government has issued order No: DPAR/02/SEHIMA/2025, by prescribing the roster

points regarding to the internal reservation, whether it has come to the notice of Government that the roster points 2, 4, 6, 8 have been prescribed as rosters points for general category in the said order is not legally binding;

(b) the roster point 7 has been moved to 9 instead of fixing after the roster point 1, 15th point instead of 14th point, 23rd point instead of 21st has been prescribed and 25th point has been dropped of the Scheduled Caste, by doing this whether it will cause injustice for the Scheduled Caste who are obtaining the reservation by moving the roster point of Scheduled Caste and violating of vide order No: DPAR/01/SBC/1977, dated: 04.03.1977 of 1977;

(c) the order dated 03.09.2025 is the order to prescribing roster points of revised reservation for the direct recruitments, since the order has not been issued with regard to the Education Department, the Government has to clarify with regard to the order based on which the admission is being provided in the education field at present;

(d) the order dated: 06.09.2025 has causing many confusions since there is no clear information with regard to prescribing the post when there is 01 and 02 posts and since posts are being prescribed repeatedly to the category for which all posts are prescribed, for resolving the same, the details of the decision taken by the Government to prescribe Scheduled Caste as general when there are 1 and 2 posts;

(e) the decision taken by the Government with regard to transfer of posts to category-B from category-A and category-C from category-B when there are no

candidates available in the same category of Scheduled Caste;

(f) the decision of the Government with regard to revision of the roster that has been prescribed to make available all the posts for general categories from the commencement of roster vide order dated: 06.09.2025?

**K.R. MAHALAKSHMI**
Secretary
Karnataka Legislative Council

Govt. Press, Vikasa Soudha Unit, Bengaluru, WD-/P5

inprotected.com